SRI R.V. DESHPANDE:– Sorry Sir, I will advise him.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಸಭಾ ತ್ಯಾಗ ಮಾಡಿದರು.)

ಬೈಲಹೊಂಗಲ ತಾಲ್ಲೂಕಿನ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗಳು

137 (980): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು, ತುರುಕರ ಶೀಗಿಹಳ್ಳಿ ಮತ್ತು ಮುರ್ಕಿಬಾವಿ ಗ್ರಾಮಗಳು ಹಾಗೂ ಸವದತ್ತಿ ತಾಲ್ಲೂಕು ಸುತ್ತಗಟ್ಟಿ, ಇಂಗಳಗಿ ಹಾಗೂ ಏಣಗಿ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರದವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು ?

ಆ) ಈ ಕೆಲಸಗಳಿಗೆ ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ ? ಹಾಗೂ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಇ) ಈ ಕೆಲಸಗಳು ಆರ್ಥಿಕ ಮುಗ್ಗಟ್ಟಿನಿಂದ ಸ್ಥಗಿತಗೊಂಡ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ನಿರ್ದಿಷ್ಟವಾದ ಅವಧಿಯೊಳಗಾಗಿ ಈ ಯೋಜನೆಗಳು ಮುಗಿಯದೇ ಇದ್ದಲ್ಲಿ ಈ ಯೋಜನೆಗಳನ್ನು ಆದ್ಯತೆಯ ಮೇಲೆ ಬೇಗನೆ ಮುಗಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್):

ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಈ ಕೆಳಕಂಡಂತೆ ಕೊಟ್ಟಿರುತ್ತಾರೆ.

	ಗ್ರಾಮದ ಹೆಸರು	ಆಡಳಿತಾತ್ಮಕ ಮಂಜೂರಾತಿ	ತಾಂತ್ರಿಕ ಮಂಜೂರಾತಿ
	ಬೈಲಹೊಂಗಲ ತಾಲ್ಲೂಕು		
1.	ವಣ್ಣೂರು	ಮಾರ್ಚಿ 87	ಮಾರ್ಚಿ 87
2.	ತುರುಕರ ಶೀಗಿಹಳ್ಳಿ	ಮಾರ್ಚಿ 89	ಮಾರ್ಚಿ 89
3.	ಮುರ್ಕಿಬಾವಿ	ಮಾರ್ಚಿ 87	ಮಾರ್ಚಿ 87
	ಸವದತ್ತಿ ಗ್ರಾಮ		
1.	ಸುತ್ತಗಟ್ಟಿ	ಫೆಬ್ರವರಿ 87	ಫೆಬ್ರವರಿ 87
2.	ಇಂಗಳಗಿ	ಮಾರ್ಚಿ 92	ಮಾರ್ಚಿ 92
3.	ಏಣಗಿ	ಇನ್ನೂ ನೀಡಿಲ್ಲ	ಇನ್ನೂ ನೀಡಿಲ್ಲ

ಆ) ಬೈಲಹೊಂಗಲ ತಾಲ್ಲೂಕು	ಮೂಲ ಅಂದಾಜು (ರೂ. ಲಕ್ಷಗಳಲ್ಲಿ)	ಇಲ್ಲಿಯವರೆಗೆ ಖರ್ಚಾದ ಮೊಬಲಗು
ವಣ್ಣೂರು ಗ್ರಾಮ	4.94	7.41
ತುರುಕರ ಶೀಗಿಹಳ್ಳಿ	2.78	3.40
ಮುರ್ಕಿಭಾವಿ	3.645	4.28
ಸೌದತ್ತಿ ತಾಲ್ಲೂಕು		
ಸುತ್ತಗಟ್ಟಿ	8.793	12.88
ಇಂಗಳಗಿ	3.40	3.12
ಏಣಗಿ	ಪ್ರಸಕ್ತ ಸಾಲಿನಲ್ಲಿ ಅಪೆಂಡಿಕ್ಸ್ 'ಇ' ನಲ್ಲಿ ಸೇರಿದ್ದು ಅದಕ್ಕೆ ಇನ್ನೂ ಆಡಳಿತಾತ್ಮಕ ಒಪ್ಪಿಗೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಬೇಕಾಗಿದೆ.	

ಇ) ಆರ್ಥಿಕ ಮುಗ್ಗಟ್ಟಿನಿಂದ ಈ ಕೆಲಸಗಳು ಸ್ಥಗಿತಗೊಂಡಿರುವುದಿಲ್ಲ.

ಈ) ಹೌದು

ಶ್ರೀ ಎಸ್. ಹೆಚ್. ಕೌಜಲಗಿ:– ಸನ್ಮಾನ್ಯ ಅಧ್ಯಕ್ಷರೆ, ಈ ಕುಡಿಯುವ ನೀರಿನ ಯೋಜನೆಗಳಿಗೆ 5 ವರ್ಷದಿಂದ ಆಡಳಿತಾತ್ಮಕ ಅವಧಿಯೊಳಗೆ ಮಂಜೂರ ಕೊಟ್ಟರೂ ಸಹಿತಾ ಇವತ್ತಿನವರೆಗೂ ಅವು ಮುಗಿದಿಲ್ಲ. ಇವು ನಿರ್ದಿಷ್ಟ ಅವಧಿಯೊಳಗೆ ಮುಗಿಯದೇ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇದರಿಂದ ಕಂಟ್ರಾಕ್ಟ್ ಕ್ಲೋಸ್ ಮಾಡಿ ಡಿಪಾರ್ಟ್‌ಮೆಂಟಿನವರೇ ತೆಗೆದುಕೊಂಡು ಮಾಡಿಸುವುದು ಒಳ್ಳೆಯದು. ಏಕೆಂದರೆ, ಏನು ಆಡಳಿತಾತ್ಮಕ ಮಂಜೂರು ಕೊಟ್ಟಿರುತ್ತಾರೋ ಅದಕ್ಕಿಂತಲೂ ಹೆಚ್ಚಿನ ಹಣ ಖರ್ಚಾಗಲಿಕ್ಕೆ ಹತ್ತಿದೆ. ಮತ್ತು ನಿರ್ದಿಷ್ಟ ಅವಧಿಯೊಳಗಾಗಿ ಆ ಕೆಲಸವನ್ನು ಮುಗಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುತ್ತಾರೆ ?

ಮೂರನೆಯದಾಗಿ, ತಾವು ಇಂಗಳಗಿ ವಿಚಾರದಲ್ಲಿ 1992ರಲ್ಲಿ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿರುವುದಾಗಿ ತಿಳಿಸಿದ್ದೀರಿ. ಆ ಉತ್ತರ ಸರಿಯಲ್ಲ, 1979ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. 1992ರಲ್ಲಿ ಅದಕ್ಕೆ ರಿವೈಸ್ಡ್ ಎಸ್ಟಿಮೇಟನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಸರಿಯಾಗಿ ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ನಮಗೆ ಎಷ್ಟು ಸಾಧ್ಯವೋ ಅಷ್ಟು ವಿವರಗಳನ್ನು ಸ್ಕೀಮ್‌ವೈಸ್ ಕೊಟ್ಟಿದ್ದೇವೆ. ಇದು ಸ್ಯಾಂಕ್ಷನ್ ಯಾವಾಗ ಆಯಿತು, ಸಾಂಕ್ಷನ್ ಆದಾಗ ಎಸ್ಟಿಮೇಟ್ ಎಷ್ಟು ಇತ್ತು ? ಇವೊತ್ತು ರಿವೈಸ್ಡ್ ಎಸ್ಟಿಮೇಟ್‌ನಲ್ಲಿ ಎಷ್ಟು ಇದೆ ? ಅದನ್ನೆಲ್ಲಾ ಕೊಟ್ಟಿದ್ದೇನೆ. ಇದನ್ನು ಪೂರ್ತಿ ಮಾಡುವುದರಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಈ ಸ್ಕೀಮ್ಸ್ ಬಗ್ಗೆ ಮಾನ್ಯ ಸದಸ್ಯರಿಗೆ ಇನ್ನೂ ವೇಗವಾಗಿ ಮಾಡಲು ಸಾಧ್ಯವಿದೆ ಎಂದು ಏನಾದರೂ ಅನಿಸಿದರೆ, ದಯವಿಟ್ಟು ಹೇಳಿದರೆ ನಾನು ಚೀಫ್ ಎಂಜಿನೀಯರ್‌ರವರನ್ನು ಕರೆಯಿಸಿ ಅವರೊಂದಿಗೆ ಚರ್ಚಿಸುತ್ತೇನೆ. ಇಲ್ಲಿ ಹಣದ ಅಭಾವ ಇಲ್ಲ. ಇದನ್ನು ಇನ್ನೂ ವೇಗವಾಗಿ ಪೂರೈಸಲಿಕ್ಕೆ ಸಾಧ್ಯ ಎಂದು ಹೇಳುವುದಾದರೆ ನಾನು ಚೀಫ್ ಇಂಜಿನಿಯರನ್ನು ಕರೆಸಿ ಚರ್ಚಿಸಿ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಒಂದು ಟೆಂಡರನ್ನು ಕೊಟ್ಟ ಮೇಲೆ ಒಂದು ವರ್ಷದೊಳಗೆ ಸದರಿ ಕೆಲಸವನ್ನು ಮಾಡಿ ಮುಗಿಸಬೇಕೆಂದು ಇರುತ್ತದೆ. 1987ರಲ್ಲಿ ಮಂಜೂರಾದ ಕೆಲಸಗಳು 1993ರಲ್ಲಿಯೂ ಮುಗಿಯುವುದಿಲ್ಲ ಅಂದರೆ ಅಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇವರುಗಳು ಏನು ಮಾಡುತ್ತಾರೆ ಅಂದರೆ ಇವೊತ್ತು ಸಾಮಗ್ರಿಗಳಿಗೆ ಖರ್ಚು ಹಾಕುತ್ತಾರೆ, ಆದರೆ ಅಮೌಂಟ್‌ನ್ನು ರಿಲೀಸ್ ಮಾಡುವುದಿಲ್ಲ.

SRI M. Y. GHORPADE:– I am prepared to sit with hon'ble member to find out the causes for delay and who is responsible for it and how to expedite the matter.

ಇಲ್ಲಿ ನಮಗೆ ಉತ್ತರ ಕೊಡಲು ಎಷ್ಟು ಸಮಯ ಇದೆ ಎಂಬುದನ್ನು ನೋಡಿಕೊಂಡು ಆದನ್ನು ಉಪಯೋಗಿಸಿಕೊಂಡು ನಾವು ಉತ್ತರವನ್ನು ಕೊಡುತ್ತೇವೆ. ಇದರ ಬಗ್ಗೆ ಇಲ್ಲಿ ಇನ್ನಷ್ಟು ವಿವರಗಳು, ಇತಿಹಾಸವನ್ನು ತಿಳಿದುಕೊಳ್ಳಬೇಕಾದರೆ ನಾವು ಇಲ್ಲಿ ಸಾಕಷ್ಟು ವೇಳೆಯನ್ನು ಕಳೆಯಬೇಕಾಗುತ್ತದೆ. ಅದನ್ನು ನಾನು ನಿಮ್ಮೊಂದಿಗೆ ಕುಳಿತು ಚರ್ಚೆ ಮಾಡಲು ತಯಾರಾಗಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಅಲ್ಲಿ ಕೆಲಸ ಆಗುತ್ತಾ ಇಲ್ಲ, ಆದನ್ನು ಮಾಡಿಸಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ಬಸವರಾಜ ರಾಯರೆಡ್ಡಿಯವರೆ ತಮ್ಮ ಪ್ರಶ್ನೆಗಳಿಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ನನ್ನ ಎಲ್ಲಾ ಪ್ರಶ್ನೆಗಳಿಗೂ ಸಮಯ ಕೇಳುತ್ತಾ ಇದ್ದಾರೆ. ಇದು ನನ್ನ ನಾಲ್ಕನೇ ಪ್ರಶ್ನೆ. ಒಂದಕ್ಕೂ ಉತ್ತರ ಬಂದಿಲ್ಲ. ಎಲ್ಲದಕ್ಕೂ ಸಮಯವನ್ನು ಕೇಳುತ್ತಾ ಇದ್ದಾರೆ. ಅದಕ್ಕೆ ಉತ್ತರಿಸಲು ಕಷ್ಟವೇನೂ ಇಲ್ಲ ಉದ್ದೇಶಪೂರ್ವಕವಾಗಿ ಕೊಡುತ್ತಾ ಇಲ್ಲ. ಉತ್ತರವನ್ನು ಕೊಡದೆ ಜಾರಿಕೊಂಡು ಹೋಗುತ್ತಾ ಇದ್ದಾರೆ. ಇದನ್ನು ನೋಡಿದರೆ ಇದು ಬಹಳ ಅಸಮರ್ಪಕವಾದಂಥ ಸರಕಾರ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು:– ಚು.ಗು.ಪ್ರ: 139ಕ್ಕೆ ಮಂತ್ರಿಗಳು ಬಂದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡುತ್ತೇನೆ.

ರಾಜ್ಯದಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ರೈತರಿಗೆ ಕೊಡುವ ಪರಿಹಾರದ ವಿಳಂಬ.

140 (940): ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ)

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ಕೊಡುವಲ್ಲಿ ವಿಳಂಬವಾಗುತ್ತಿರುವುರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ವಿಳಂಬ ತಡೆಗಟ್ಟಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ? (ವಿವರ ನೀಡುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):

ಅ) ಹೌದು